ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| **ಹೇಳಿಕೆ ಹಾಳೆ**<br>**(ಆರ್.ಪಿ.ಸಂಖ್ಯೆ 57)**<br>**ನಮೂನೆ ಸಂಖ್ಯೆ 4** |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 103/2015**

**ಫ್ರಾಸಾ- 11 ಚಾಸಾ- 38**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಲಕ್ಷ್ಮೀ ಬಿ ಎಸ್ |
| ಗಂಡನ ಹೆಸರುಃ | : | ಸುದರ್ಶನ್ ಎ ಆರ್ |
| ವಯಸ್ಸುಃ | : | 47 ವರ್ಷ |
| ಉದ್ಯೋಗಃ | : | ಹಿರಿಯ ಮೋಟಾರು ವಾಹನಾಧಿಕಾರಿ |
| ವಾಸ | : | ಬೆಂಗಳೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 19-09-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಆಗಸ್ಟ್ 2010ರಿಂದ ಆಗಸ್ಟ್ 2016ರವರೆಗೆ ನಾನು ಹಾಸನ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಮೋಟಾರು ವಾಹನ ತಪಾಸಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕ 13-11-2013ರಂದು ಕರ್ನಾಟಕ ಲೋಕಾಯುಕ್ತ ಹಾಸನ ಕಛೇರಿಯ ಪೊಲೀಸ್ ನಿರೀಕ್ಷಕರು ಕೆಎ-13-ಎಸ್-0029ರ ಟಿ ವಿ ಎಸ್ ಸ್ಕೂಟಿಯ ನಿರ್ವಹಣಾ ವೆಚ್ಚ ಮತ್ತು ಇಂಧನ ವೆಚ್ಚದ ಬಗ್ಗೆ ವರದಿಯನ್ನು ನೀಡಬೇಕೆಂದು ಕೋರಿಕೊಂಡು ಕಛೇರಿಗೆ ಮನವಿ ಸಲ್ಲಿಸಿದ್ದರು. ಅವರು ನೀಡಿದ ಮಾಹಿತಿಯಂತೆ ನಾನು ಕಛೇರಿಯಲ್ಲಿ ಆ ವಾಹನದ ನಿರ್ವಹಣಾ ವೆಚ್ಚ ಮತ್ತು ಇಂಧನ ವೆಚ್ಚವನ್ನು ಲೆಕ್ಕಹಾಕಿ 17-1-2014ರಂದು ನನ್ನ ವರದಿಯನ್ನು ನಿಪಿ-67ರಂತೆ ನೀಡಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-67(ಎ) ಎಂದು ಗುರುತಿಸಲಾಯಿತು. ಆ ವಾಹನಕ್ಕೆ ಸಂಬಂಧಿಸಿದ ಬಿ ಎಕ್ಸ್ಟ್ರಾಕ್ಟ್ ಮತ್ತು ರಿಜಿಸ್ಟರ್ ಎಕ್ಸ್ಟ್ರಾಕ್ಟ್ ನೀಡಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-68 ಮತ್ತು 69 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ಆ ವರದಿ ನೀಡುವುದಕ್ಕಿಂತ ಮೊದಲು ನಾನು ಆ ವಾಹನದ ತಪಾಸಣೆ ನಡೆಸಿಲ್ಲ. ಯಾವುದೇ ವಾಹನದ ಇಂಧನ ಖರ್ಚು ಆ ವಾಹನವನ್ನು ಯಾವ ರೀತಿಯಲ್ಲಿ ಚಾಲಿಸುತ್ತಾರೆ ಎಂಬುದನ್ನು ಅವಲಂಬಿಸುತ್ತದೆ ಎನ್ನುವುದು ನಿಜ. ಈ ಬಗ್ಗೆ ಆ ವಾಹನ ಮಾಲೀಕರಿಂದ ನಾನು ವರದಿ ಪಡೆದಿಲ್ಲ. ಆ ವಾಹನವನ್ನು ಎಲ್ಲಿ ರಿಪೇರಿ ಮಾಡಿರುತ್ತಾರೆ ಎಂಬ ಮಾಹಿತಿ ಪಡೆದು ವರದಿ ನೀಡಿರುತ್ತೇನೆ. ಆ ವಿಚಾರವನ್ನು ನನ್ನ ವರದಿಯಲ್ಲಿ ಕಾಣಿಸಿಲ್ಲ. ಯಾವ ವರ್ಷದಂದು ಆ ವಾಹನ ಹೆಚ್ಚು ಬಳಕ್ಕೆ ಆಗಿತ್ತು ಎಂಬ ಬಗ್ಗೆ ಮಾಹಿತಿಯನ್ನು ನಾನು ವಾಹನ ಮಾಲೀಕರಿಂದ ಪಡೆದಿಲ್ಲ. ನಮ್ಮ ಇಲಾಖೆಯಲ್ಲಿ ವಾಹನಗಳ ಖರ್ಚುವೆಚ್ಚದ ಮಾಹಿತಿಯನ್ನು ನೀಡುವ ಯಾವುದೇ ಮಾರ್ಗಸೂಚಿ ಇಲ್ಲ ಎಂದರೆ ಸರಿಯಲ್ಲು. ನಾನು ಲೋಕಾಯುಕ್ತ ಪೊಲೀಸರ ಸೂಚನೆ ಮೇರೆಗೆ ನಿರ್ವಹಣಾ ವೆಚ್ಚ ಮತ್ತು ಇಂಧನ ವೆಚ್ಚದ ಅಧಿಕ ಮೌಲ್ಯ ಸೂಚಿಸಿ ಸುಳ್ಳು ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅದರ ನಿರ್ವಹಣಾ ವೆಚ್ಚ ಮತ್ತು ಇಂಧನ ವೆಚ್ಚ ಕೇವಲ 17000ರೂಪಾಯಿ ಮಾತ್ರ ಆಗಿತ್ತು ಎಂದರೆ ಸರಿಯಲ್ಲ. ನಾನು ವಾಹನವನ್ನು ಪರಿಶೀಲನೆ ಮಾಡದೆ ಮತ್ತು ಅದರ ಪೂರ್ಣ ಮಾಹಿತಿ ಪಡೆದುಕೊಳ್ಳದೆ ನೀಡಿರುವ ಮಾಹಿತಿಯು ಅಪೂರ್ಣವಾಗಿದ್ದು ಒಪ್ಪಿಕೊಳ್ಳತಕ್ಕದ್ದಲ್ಲ ಎಂದರೆ ಸರಿಯಲ್ಲ.

2.ಯಾವ ಮಾರ್ಗಸೂಚಿಯನ್ವಯ ನಾನು ಆ ವರದಿ ನೀಡಿರುತ್ತೇನೆ ಎಂದು ನಮೂದಿಸಿಲ್ಲ ಹಾಗೂ ನಮೂದಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಆ ಮಾರ್ಗಸೂಚಿಯನ್ನು ಅನುಸರಿಸದಿರುವುದರಿಂದಲೇ ಆ ವಿಚಾರವನ್ನು ನಾನು ನನ್ನ ವರದಿಯಲ್ಲ ಕಾಣಿಸಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**